ದಿನಾಂಕಃ 19.03.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ.ಜೆಎಸ್ ವಕೀಲರಿಂದ ಒಂದನೇ ಎದುರುದಾರರ ಪರವಾಗಿ.

ನನ್ನ ಮುಖ್ಯವಿಚಾರಣೆಯಾಗಿ ಹಾಜರುಪಡಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತವೆ.

ಕಂಪನಿಯ ಪರವಾಗಿ ಹಾಜರಾಗಿ ದಾಖಲೆಗಳನ್ನು ಹಾಜರುಪಡಿಸಿ ಸಾಕ್ಷ್ಯ ನುಡಿಯಲು ಬರೆದುಕೊಟ್ಟಿರುವ ಅಧಿಕಾರ ಪತ್ರವನ್ನು ಮತ್ತು ಒಂದು ವಿಮಾ ಪಾಲಸಿಯ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಆರ್ಃ1 ಮತ್ತು 2 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಶ್ರೀ. ಬಿವೈಆರ್ ವಕೀಲರಿಂದ ಅರ್ಜಿದಾರರ ಪರವಾಗಿ.

ಅಪಘಾತದ ಕುರಿತಂತೆ ನನಗೆ ವೈಯಕ್ತಿಕವಾಗಿ ತಿಳಿದಿರುವುದಿಲ್ಲ ಆದರೆ ಪೋಲೀಸ್ ದಾಖಲೆಗಳ ಆಧಾರದ ಮೇಲೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. ನ್ಯಾಯಾಲಯದಿಂದ ನೋಟೀಸು ಬಂದ ನಂತರ ನಮ್ಮ ಕಂಪನಿಯವರು ವಿಮೆ ಹೊಂದಿರುವಂತಹ ವಾಹನದ ಮಾಲೀಕರು ಮತ್ತು ವಾಹನದ ಸವಾರನಿಂದ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಅಪಘಾತ ನಡೆದ ಸ್ಥಳದ ಹತ್ತಿರ ಪಾದಚಾರಿಗಳು ರಸ್ತೆಯನ್ನು ದಾಟಲು ಪಾದಚಾರಿ ಮಾರ್ಗ ಇರುತ್ತದೆ ಎಂದರೆ ಸರಿ. ದ್ವಿಚಕ್ರ ವಾಹನದ ಸವಾರನು ಒಂದು ಆಟೋರೀಕ್ಷಾವನ್ನು ಓವರ್‌ಟೇಕ್ ಮಾಡಲು ಹೋಗಿ ನಿಯಂತ್ರಣ ತಪ್ಪಿ ಪಾದಚಾರಿಗೆ ಡಿಕ್ಕಿಹೊಡೆಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಪ್ರಕರಣದಲ್ಲಿ ತನಿಖಾಧಿಕಾರಿಯು ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿದ ನಂತರ ನಮ್ಮ ಕಂಪನಿಯಲ್ಲಿ ವಿಮೆ ಹೋಂದಿರುವ ದ್ವಿಚಕ್ರ ವಾಹನದ ಸವಾರನ ವಿರುದ್ದ ದೋಷರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ